**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ.**

**ಹಿರೇಕೆರೂರು.**

**ಸಿ.ಸಿ.ನಂಬರ್ಃ 117/2018**

ಸಿಡಬ್ಲ್ಯೂಃ 1

ಪಿಡಬ್ಲ್ಯೂಃ 1

| | | |
|---|---|---|
| ಸಾಕ್ಷಿಯ ಹೆಸರು | : | ನಾಗಮ್ಮ @ ನಿರ್ಮಲ |
| ಗಂಡನ ಹೆಸರು | : | ಉಜ್ಜನಗೌಡ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಚಿಕ್ಕೇರೂರು |

ಇಂದು ದಿನಾಂಕಃ 19.03.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಎಪಿಪಿಯವರಿಂದಃ

1. ಚಾಸಾ-5 ನನಗೆ ತಮ್ಮ ಮತ್ತು ಚಾಸಾ-7 ನನ್ನ ಅತ್ತಿಗೆ ಆಗಬೇಕು. ಚಾಸಾ-8 ರಿಂದ 13ರವರ ಪರಿಚಯ ನನಗೆ ಇದೆ. ಸುಮಾರು 4 ವರ್ಷಗಳ ಹಿಂದೆ ಚಾಸಾ-6ರವರು ಮಗನ ತೊಟ್ಟಿಲ ಶಾಸ್ತ್ರ ಇದೆ ಎಂದು ದೂರವಾಣಿ ಮುಖಾಂತರ ಕರೆದಿದ್ದು, ಅದರಂತೆ ನಾನು ಹಾಗೂ ನನ್ನ ಮಗಳಾದ ನಿಖಿತಾ ಅವರು ಕಡೂರಿನಿಂದ ಅಬಲೂರಿಗೆ ಆಟೋದ ಮೂಲಕ ಹೋಗಿರುತ್ತೇವೆ. ಸದರಿ ಆಟೋದಲ್ಲಿ ನಮ್ಮೊಂದಿಗೆ ಚಾಸಾ-7 ರಿಂದ 13ರವರು ಮತ್ತು ಇನ್ನಿತರರೊಂದಿಗೆ ತೊಟ್ಟಿಲ ಶಾಸ್ತ್ರಕ್ಕಾಗಿ ಹೋಗಿರುತ್ತೇವೆ. ನಾವು ತೊಟ್ಟಿಲ ಶಾಸ್ತ್ರವನ್ನು ಅಬಲೂರಿನಲ್ಲಿ ಮುಗಿಸಿಕೊಂಡು ಕಡೂರಿಗೆ ವಾಪಸ್ಸು ಬರುವ ಸಂದರ್ಭದಲ್ಲಿ ರಟ್ಟಿಹಳ್ಳಿ ಸ್ವಲ್ಪ ದೂರದಲ್ಲಿ ಇರುವ ಕುಮುದ್ವತಿ ಸೇತುವೆಯ ಹತ್ತಿರ ಆಟೋ ಚಾಲಕನು ಆಟೋವನ್ನು ವೇಗವಾಗಿ ಚಲಾಯಿಸಿರುತ್ತಾನೆ. ಚಾಲಕನು ವೇಗವಾಗಿ ಆಟೋವನ್ನು ಚಲಾಯಿಸಿದ್ದರಿಂದ ನಾವು ಪ್ರಯಾಣಿಸುತ್ತಿದ್ದ ಆಟೋವು ಮಗುಚಿ ಬಿದ್ದಿರುತ್ತದೆ. ಆಟೋವು ಬಿದ್ದಿದ್ದರಿಂದ ನನಗೆ ಮತ್ತು ನನ್ನ ಮಗಳಿಗೆ ಕಾಲು, ತಲೆ ಹಾಗೂ ಕೈ ನ ಭಾಗಗಳಿಗೆ ನೋವು ಉಂಟಾಗಿರುತ್ತದೆ.

2. ಸದರಿ ಅಪಘಾತದಲ್ಲಿ ಮಲ್ಲಮ್ಮ ಎಂಬುವವರು ಮರಣ ಹೊಂದಿರುತ್ತಾರೆ. ಅದರಂತೆ ಕರಬಸಮ್ಮ ಅವರಿಗೆ ತೀವ್ರವಾಗಿ ಗಾಯಗಳು ಉಂಟಾಗಿರುತ್ತವೆ. ಅದೇ ರೀತಿ ಚಾಸಾ-7ರವರಿಗೂ ಸಹ ಗಾಯಗಳು ಉಂಟಾಗಿರುತ್ತವೆ. ಆಟೋವನ್ನು ಚಲಾಯಿಸುತ್ತಿದ್ದ ಆಟೋ ಚಾಲಕನಿಗೂ ಸಹ ಸಾಕಷ್ಟು ಗಾಯಗಳು ಉಂಟಾಗಿರುತ್ತವೆ.

3. ಅಪಘಾತದಲ್ಲಿ ನಾನು ಮತ್ತು ಇನ್ನಿತರರು ಗಾಯಗೊಂಡಿದ್ದರಿಂದ ಆಂಬ್ಯುಲೆನ್ಸ ಮುಖಾಂತರ ನಮ್ಮನ್ನು ರಟ್ಟಿಹಳ್ಳಿ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲು ಮಾಡಿರುತ್ತಾರೆ. ರಟ್ಟಿಹಳ್ಳಿ ಆಸ್ಪತ್ರೆಯ ವೈದ್ಯರು ಚಾಸಾ-12 ಮತ್ತು ಮೃತ ಮಲ್ಲಮ್ಮ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ದಾವಾಣಗೆರೆ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮಾರ್ಗ ಮಧ್ಯೆ ಮೃತಪಟ್ಟಿರುತ್ತಾರೆ.

4. ಚಿಕಿತ್ಸೆ ಪಡೆದ ನಂತರ ನಾನು ರಟ್ಟಿಹಳ್ಳಿ ಪೋಲೀಸ್ ಠಾಣೆಗೆ ಹೋಗಿ ಅಪಘಾತಕ್ಕೆ ಸಂಬಂಧಿಸಿದಂತೆ ಫಿರ್ಯಾದಿಯನ್ನು ನೀಡಿರುತ್ತೇನೆ. ಸಾಕ್ಷಿಯು ಫಿರ್ಯಾದಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಫಿರ್ಯಾದಿಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಫಿರ್ಯಾದಿಯ ಆಧಾರದ ಮೇಲೆ ದಾಖಲಿಸಿದ ಪ್ರ.ವ.ವ.ಯಲ್ಲಿ ಸಾಕ್ಷಿಯು ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಪ್ರ.ವ.ವ.ಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

5. ಘಟನೆಯ ಮುಂದಿನ ದಿನದಂದು ನಾನು ಪೋಲೀಸರನ್ನು ಅಪಘಾತವಾದ ಸ್ಥಳಕ್ಕೆ ಕರೆದುಕೊಂಡು ಹೋಗಿ ತೋರಿಸಿರುತ್ತೇನೆ. ಅಪಘಾತತ ಸ್ಥಳದಲ್ಲಿ ಪೋಲೀಸರು ನನ್ನ ಮತ್ತು ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ಬೆಳಿಗ್ಗೆ 10-00 ರಿಂದ 12-00 ಗಂಟೆಯ ಸಮಯದಲ್ಲಿ ಬರೆದಿರುತ್ತಾರೆ. ಪಂಚನಾಮೆಯ ಸಮಯದಲ್ಲಿ ಅಪಘಾತತ ಸ್ಥಳದಲ್ಲಿ ಆಯಿಲ್ ಬಿದ್ದಿರುವುದು ಕಂಡು ಬಂದಿರುತ್ತದೆ. ಸಾಕ್ಷಿಯು ಘಟನಾ ಸ್ಥಳದ ಪಂಚನಾಮೆಯಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಘಟನಾ ಸ್ಥಳದ ಪಂಚನಾಮೆಯನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಪೋಲೀಸರು ಅಪಘಾತವಾದ ಸ್ಥಳದಲ್ಲಿ ಛಾಯಾಚಿತ್ರಗಳನ್ನು ತೆಗೆದುಕೊಂಡಿರುತ್ತಾರೆ ಸಾಕ್ಷಿಯು ಅಪಘಾತವಾದ ಸ್ಥಳದಲ್ಲಿ ತೆಗೆದುಕೊಂಡ 8 ಛಾಯಾಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-4 ರಿಂದ 11 ಎಂದು ಗುರುತಿಸಲಾಯಿತು. ಸಾಕ್ಷಿಯು ಘಟನೆಯ ದಿನದಂದು 1 ನೇ ಆರೋಪಿಯು ಅಪಘಾತಕ್ಕೆ ಒಳಪಟ್ಟ ಆಟೋವನ್ನು ಚಲಾಯಿಸುತ್ತಿದ್ದರು ಎಂದುನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಅಭಿಯೋಜನೆಗೆ ಬಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ** ಮಾನ್ಯ ಎಪಿಪಿಯವರಿಂದಃ

ದಿನಾಂಕಃ 19.03.2017 ರಂದು ಅಪಘಾತವು ನಡೆದಿರುತ್ತದೆ ಎಂದರೆ ನನಗೆ ನೆನಪಿಲ್ಲ. ಸದರಿ ಅಪಘಾತದಲ್ಲಿ ಚಾಸಾ-6 ರವರಿಗೆ ಗಾಯಗಳಾಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಪಂಚನಾಮೆಯನ್ನು ದಿನಾಂಕಃ 20.03.2017 ರಂದು ಬೆಳಿಗ್ಗೆ 10-00 ರಿಂದ 11-00 ಗಂಟೆಯ

ಸಮಯದಲ್ಲಿ ಜರುಗಿಸಿರುತ್ತಾರೆ ಎಂದರೆ ಸರಿ. ಅಪಘಾತಪಡಿಸಿದ ಆಟೋವನ್ನು ನನ್ನ ತಮ್ಮ ಬಾಡಿಗೆಯ ಆಧಾರದಲ್ಲಿ ತೆಗೆದುಕೊಂಡು ಬಂದಿದ್ದನು ಎಂದರೆ ಸರಿ. ನಾವು ತೊಟ್ಟಿಲ ಶಾಸ್ತ್ರಕ್ಕೆಂದು ಅಬಲೂರಿಗೆ ಚಾಸಾ-6 ರಿಂದ 13 ಮತ್ತು ನಿಖಿತಾ, ಗಗನ ಮತ್ತು ಪ್ರಿಯಾ ಆರೋಪಿಯು ಚಲಾಯಿಸುತ್ತಿದ್ದ ಆಟೋದಲ್ಲಿ ಪ್ರಯಾಣಿಸುತ್ತಿದ್ದರು ಎಂದರೆ ಸರಿ. ನಾನು ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿದ್ದು, ಅದರಲ್ಲಿ ರಟ್ಟಿಹಳ್ಳಿ ಗ್ರಾಮದ ಸಮೀಪ ಇರುವ ಕುಮುದ್ವತಿ ಸೇತುವೆ ಹತ್ತಿರ ರಸ್ತೆಯ ಎಡಬದಿ ನಿಂತಿದ್ದು, ಮೋಟಾರ್ ಸೈಕಲ್ ಚಾಲಕನು ರಟ್ಟಿಹಳ್ಳಿ ಕಡೆಗೆ ಹೋಗಲು ರಸ್ತೆಯಲ್ಲಿ ಹೋಗುವ ಬರುವ ವಾಹನಗಳನ್ನು ನೋಡದೆ ಏಕಾಏಕಿ ಮುನ್ಸೂಚನೆಯನ್ನು ನೀಡದೆ ತಿರುಗಿಸಿದಾಗ ಮತ್ತು ಸದರಿ ಮೋಟಾರ್ ಸೈಕಲ್ ಚಾಲಕನಿಗೆ ಅಪಘಾತ ಆಗಬಹುದು ಎಂದು ತಿಳಿದು ಬಲಕ್ಕೆ ಕಟ್ ಮಾಡಿದಾಗ ಆಟೋವು ಬಿದ್ದಿರುತ್ತದೆ ಎಂದು ಹೇಳಿಕೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿ. ಆ ರೀತಿ ಆಟೋವು ಬಿದ್ದಿದ್ದರಿಂದ ನನಗೆ, ಚಾಸಾ-7 ರಿಂದ 13 ರವರಿಗೆ ಗಾಯಗಳಾಗಿರುತ್ತವೆ ಎಂದರೆ ಸರಿ. ಒಮ್ಮಲೇ ರಟ್ಟಿಹಳ್ಳಿ ರಸ್ತೆಯಲ್ಲಿ ದ್ವಿಚಕ್ರ ವಾಹನವನ್ನು ತಿರುಗಿಸಿದ ವ್ಯಕ್ತಿಯ ಹೆಸರು ಗುರುಮೂರ್ತಿ ತಂದೆ ಜಗದೀಶಯ್ಯ ಹಿರೇಮಠ ಎಂದು ತಿಳಿದು ಬಂದಿರುತ್ತದೆ ಎಂದರೆ ಸರಿ. .ಈ ಸದರಿ ಅಪಘಾತವು ಆಟೋದ ಚಾಲಕನ ನಿರ್ಲಕ್ಷ್ಯತೆಯಿಂದ ಆಗಿರುತ್ತದೆ ಎಂದು ಅಲ್ಲದೇ ದ್ವಿಚಕ್ರ ವಾಹನದ ಚಾಲಕನಿಂದಲೂ ಸಹ ಅಪಘಾತವು ಉಂಟಾಗಿರುತ್ತದೆ ಎಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ. ಘಟನೆಯು ಸಂಜೆ 5-00 ಗಂಟೆಯ ಸಮಯದಲ್ಲಿ ಆಗಿರುತ್ತದೆ. ಘಟನೆಯ ದಿನ ದ್ವಿಚಕ್ರ ವಾಹನವನ್ನು ಓಡಿಸುತ್ತಿದ್ದ 2 ನೇ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ</u>** 1 ನೇ ಆರೋಪಿಯ ಪರ ಶ್ರೀ ವಿ.ವಿ.ಎಮ್. ವಕೀಲರಿಂದಃ

1. ನನ್ನ ಗಂಡನ ಮನೆ ಚಿಕ್ಕಯಡಚಿ ಗ್ರಾಮ. ನಾವು ನಾವು ಅಬಲೂರಿಗೆ ತೊಟ್ಟಿಲ ಶಾಸ್ತ್ರಕ್ಕೆ ಹೋಗಬೇಕೆಂದು ಕಡೂರಿನಿಂದ ಬೆಳಿಗ್ಗೆ 10-00 ಗಂಟೆಯ ಸಮಯಕ್ಕೆ ಹೊರಟಿರುತ್ತೇವೆ. ಅಬಲೂರಿಗೆ ರಟ್ಟಿಹಳ್ಳಿಯ ಮುಖಾಂತರ ಹೋಗಿರುತ್ತೇವೆ. ನಾವು ಅಬಲೂರನ್ನು ತಲುಪಿದಾಗ ಮದ್ಯಾಹ್ನ 1-00 ಗಂಟೆ ಆಗಿತ್ತು. ಕಡೂರಿನಿಂದ ಅಬಲೂರು ಗ್ರಾಮಕ್ಕೆ ಸುಮಾರು 15 ರಿಂದ 20 ಕಿ.ಮೀ. ಗಳ ಅಂತರ ಇದೆ. ತೊಟ್ಟಿಲ ಶಾಸ್ತ್ರದ ಕಾರ್ಯಕ್ರಮನ್ನು ಸಂಜೆ 4-00 ಗಂಟೆಯ ಸಮಯಕ್ಕೆ ಮುಗಿದಿರುತ್ತದೆ. ಕಾರ್ಯಕ್ರಮವು ಮುಗಿದ ತಕ್ಷಣವೇ ಅಬಲೂರಿನಿಂದ ಹೊರಟಿರುತ್ತೇವೆ ಅಬಲೂರಿನಿಂದ ರಟ್ಟಿಹಳ್ಳಿಗೆ ಸುಮಾರು 8 ರಿಂದ 10 ಕಿ.ಮೀ.ಗಳ ಅಂತರ ಇದೆ ಎಂದರೆ ಸರಿ.

2. ಘಟನೆಯ ದಿನ ಆಟೋದಲ್ಲಿ ಸುಮಾರು 15 ಜನ ಪ್ರಯಾಣಿಸುತ್ತಿದ್ದೆವು. ಕುಮುದ್ವತಿ ಸೇತುವೆಯು ಆದ ಸುಮಾರು 15 ಮೀಟರ್‌ಗಳ ಅಂತರದಲ್ಲಿ 'ಎಸ್' ಆಕಾರದಲ್ಲಿ ಒಂದು ಕ್ರಾಸ್ ಇದೆ ಎಂದರೆ ಸರಿ. ಸದರಿ ಕ್ರಾಸ್‌ಗೆ ಹೊಂದಿಕೊಂಡಂತೆ ಒಂದು ವೇಗ ನಿಯಂತ್ರಣ ತಡೆ ಇದೆ ಎಂದರೆ ಸರಿ. ಸದರಿ ವೇಗ ನಿಯಂತ್ರಣದ ಹತ್ತಿರ 1 ನೇ ಆರೋಪಿಯು ಆಟೋವನ್ನು ನಿಧಾನವಾಗಿ

ಚಲಾಯಿಸಿರುತ್ತಾನೆ ಎಂದರೆ ಸರಿ. ಸದರಿ ವೇಗ ನಿಯಂತ್ರಣ ತಡೆಯಿಂದ ಕುಮುದ್ವತಿ ಸೇತುವೆಯು ಸುಮಾರು 15 ರಿಂದ 20 ಅಡಿಗಳು ಇದೆ ಎಂದರೆ ಸರಿ. ಆಟೋವನ್ನು ಸದರಿ ವೇಗ ನಿಯಂತ್ರಣ ತಡೆಯಿಂದ 1 ನೇ ಆರೋಪಿಯು ಚಲಾಯಿಸುವ ಸಂದರ್ಭದಲ್ಲಿ 2 ನೇ ಆರೋಪಿಯು ಸದರಿ ರಸ್ತೆಯ ಕುಮುದ್ವತಿ ಸೇತುವೆಯ ಮೇಲೆ ಫೋನಿನಲ್ಲಿ ಮಾತನಾಡಿಕೊಂಡು ತನಗೆ ಸೇರಿದ ದ್ವಿಚಕ್ರ ವಾಹನದ ಮೇಲೆ ಕುಳಿತಿದ್ದನು ಎಂದರೆ ಸರಿ. 1 ನೇ ಆರೋಪಿಯು ಆಟೋವು 2 ನೇ ಆರೋಪಿಯು ನಿಂತಿದ್ದ ಸುಮಾರು 5 ಅಡಿಗಳ ಅಂತರದಲ್ಲಿ ಹತ್ತಿರಕ್ಕೆ ಬಂದಾಗ ಇದ್ದಕ್ಕಿದ್ದ ಹಾಗೇ 2 ನೇ ಆರೋಪಿಯು ನನ್ನ ದ್ವಿಚಕ್ರ ವಾಹನವನ್ನು ಎಡ ಭಾಗಕ್ಕೆ ತಿರುಗಿಸಿದ ತಕ್ಷಣಕ್ಕೆ ಆಟೋದಲ್ಲಿದ್ದ ನಾವೆಲ್ಲರೂ ಕೂಗಿಕೊಂಡಿರುತ್ತೇವೆ ಎಂದರೆ ಸರಿ. ಆ ಸಮಯದಲ್ಲಿ 2 ನೇ ಆರೋಪಿಯ ದ್ವಿಚಕ್ರ ವಾಹನದಕ್ಕೆ ಅಪಘಾತವಾಗಬಹುದು ಎಂದು ತಿಳಿದು, 1 ನೇ ಆರೋಪಿಯು ತನ್ನ ಆಟೋವನ್ನು ಸ್ವಲ್ಪ ಎಡಭಾಗಕ್ಕೆ ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ಒಂದು ಪಕ್ಷ 1 ನೇ ಆರೋಪಿಯು ತಾನು ಚಲಾಯಿಸುತ್ತಿದ್ದ ಆಟೋವನ್ನು ಇನ್ನಷ್ಟು ಎಡಭಾಗಕ್ಕೆ ತೆಗೆದುಕೊಂಡಿದ್ದರೆ ಸೇತುವೆಯನ್ನು ಜಿಗಿದು ಆಟೋವು 30 ಅಡಿಗಳ ಕೆಳಗೆ ಬೀಳುತ್ತದೆ ಎಂದರೆ ಸರಿ. ಸದರಿ ಅಪಘಾತವನ್ನು ತಪ್ಪಿಸಲು 1 ನೇ ಆರೋಪಿಯು ತನ್ನ ಆಟೋವನ್ನು ಬಲಭಾಗಕ್ಕೆ ತೆಗೆದುಕೊಂಡಿರುತ್ತಾನೆ ಎಂದರೆ ಸರಿ. ಒಂದು ಪಕ್ಷ 1 ನೇ ಆರೋಪಿಯು ಆಟೋವನ್ನು ಬಲಗಡೆಗೆ ತೆಗೆದುಕೊಳ್ಳದಿದ್ದರೆ ಆಟೋವು ಸೇತುವೆ ಮೇಲಿಂದ 30 ಅಡಿಗಳ ಕೆಳಗೆ ಬಿದ್ದು, ಪ್ರಯಾಣಿಕರೆಲ್ಲರು ಮರಣ ಹೊಂದುವ ಸಾಧ್ಯತೆ ಇತ್ತು ಎಂದರೆ ಸರಿ.

3. ನಾನು 3 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದು, ಓದಲು ಮತ್ತು ಬರೆಯಲು ಬರುತ್ತದೆ. ನಾನು ಫಿರ್ಯಾದನ್ನು ರಟ್ಟಿಹಳ್ಳಿ ಪೋಲೀಸ್ ಠಾಣೆಯಲ್ಲಿ ನೀಡಿರುತ್ತೇನೆ. ನಾನು ಘಟನೆಗೆ ಬಗ್ಗೆ ನೀಡಿದ ಮಾಹಿತಿಯ ಆಧಾರದ ಮೇಲೆ ಪೋಲೀಸರು ಫಿರ್ಯಾದನ್ನು ತಯಾರಿಸಿರುತ್ತಾರೆ. ನಾನು ಮೊದಲಿಗೆ ಫಿರ್ಯಾದನ್ನು ನೀಡುವಾಗ 2 ನೇ ಆರೋಪಿಯು ತನ್ನ ದ್ವಿಚಕ್ರ ವಾಹನವನ್ನು ತಕ್ಷಣವೇ ಬಲಭಾಗಕ್ಕೆ ತಿರುಗಿಸಿದ್ದರಿಂದ ಈ ಸದರಿ ಅಪಘಾತವು ಸಂಭವಿಸಿರುತ್ತದೆ ಎಂದು ಹೇಳಿರಲಿಲ್ಲ. ನನಗೆ ಗಾಯಗಳು ಆಗಿದ್ದರಿಂದ ಅಪಘಾತದ ಎಲ್ಲಾ ವಿಷಯಗಳನ್ನು ಹೇಳಲು ಆಗಿರುವುದಿಲ್ಲ.

4. ನಾನು ಘಟನೆಗೆ ಸಂಬಂಧಿಸಿದಂತೆ ಪುನರ್ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ. ಘಟನೆಯ ದಿನ ಅಪಘಾತವು ಸಂಪೂರ್ಣವಾಗಿ 2 ನೇ ಆರೋಪಿಯು ತಕ್ಷಣವೇ ತನ್ನ ದ್ವಿಚಕ್ರ ವಾಹನವನ್ನು ತೆಗೆದುಕೊಂಡಿದ್ದರಿಂದ ಆಗಿರುತ್ತದೆ ಎಂದರೆ ಸರಿ. ಸದರಿ ಅಪಘಾತದಲ್ಲಿ 1 ನೇ ಆರೋಪಿಯ ತಪ್ಪು ಇಲ್ಲ ಎಂದರೆ ಸರಿ. ಅಪಘಾತದಲ್ಲಿ ಗಾಯಗಳು ಆಗಿರುವುದಕ್ಕೆ ಸಂಬಂಧಿಸಿದಂತೆ ನಾನು ಹಾಗೂ ಗಾಯಗೊಂಡ ಇನ್ನಿತರ ಗಾಯಾಳುಗಳು ಪರಿಹಾರ ಕೋರಿ ಅರ್ಜಿಯನ್ನು ಸಲ್ಲಿಸಿರುತ್ತೇವೆ. ನಾನು ಈ ಘಟನೆಯಲ್ಲಿ ಫಿರ್ಯಾದನ್ನು ಕೇವಲ ಪರಿಹಾರ ಪಡೆಯುವ ಉದ್ದೇಶದಿಂದ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಈ ಅಪಘಾತದಲ್ಲಿ 1 ನೇ ಆರೋಪಿಯ ಯಾವುದೇ ತಪ್ಪು ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 2 ನೇ ಆರೋಪಿಯ ಪರ ಶ್ರೀ ಯು.ಬಿ.ಜೆ. ವಕೀಲರಿಂದಃ

ವಕೀಲರು 2 ನೇ ಆರೋಪಿಗೆ ಇದುವರೆಗೂ ಸಹ ದೋಷಾರೋಪಣೆ ಪಟ್ಟಿಯ ಪ್ರತಿಯನ್ನು ನೀಡಿಲ್ಲವೆಂದು ಪಾಟೀ ಸವಾಲಿಗೆ ಸಮಯಾವಕಾಶವನ್ನು ಕೋರಿರುತ್ತಾರೆ. ಆದ್ದರಿಂದ ಸಕಾರಣಗಳು ಇರುವುದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.

**<u>ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ.</u>**

**<u>ಹಿರೇಕೆರೂರು.</u>**

**<u>ಸಿ.ಸಿ.ನಂಬರ್ಃ 117/2018</u>**

ಸಿಡಬ್ಲ್ಯೂಃ

ಪಿಡಬ್ಲ್ಯೂಃ

| | | |
|---|---|---|
| ಸಾಕ್ಷಿಯ ಹೆಸರು | : | ರೇವಣೆಪ್ಪ |
| ತಂದೆಯ ಹೆಸರು | : | ನಾಗಪ್ಪ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಕಡೂರು |

ಇಂದು ದಿನಾಂಕಃ 19.03.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ</u>** ಮಾನ್ಯ ಎಪಿಪಿಯವರಿಂದಃ

1. ಸಾಕ್ಷಿಯು ಘಟನಾ ಜಾಗೆಯ ಪಂಚನಾಮೆಯಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಘಟನಾ ಪಂಚನಾಮೆಯನ್ನು ಈಗಾಗಲೇ ನಿಪಿ-3 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ-3(ಬಿ) ಮತ್ತು (ಸಿ) ಎಂದು ಗುರುತಿಸಲಾಯಿತು. ನಾನು ಸದರಿ ಪಂಚನಾಮೆಗೆ ಸಹಿಗಳನ್ನು ರಟ್ಟಿಹಳ್ಳಿ ಪೋಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಪಂಚನಾಮೆಯಲ್ಲಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಪೋಲೀಸರು 8 ಛಾಯಾಚಿತ್ರಗಳನ್ನು ಯಾವ ಕಾರಣಕ್ಕೆ ಮತ್ತು ಉದ್ದೇಶಕ್ಕೆ ತೆಗೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

2. ಸಾಕ್ಷಿಯು ಶವ ಪಂಚನಾಮೆಯಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಶವ ಪಂಚನಾಮೆಯನ್ನು ನಿಪಿ-12 ಎಂದು, ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ನನಗೆ ಶವ ಪಂಚನಾಮೆಯಲ್ಲಿರುವ ಅಂಶಗಳ ಬಗ್ಗೆ ಮಾಹಿತಿ ಇರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ** ಮಾನ್ಯ ಎಪಿಪಿಯವರಿಂದಃ

ದಿನಾಂಕಃ 23.03.2017 ರಂದು ಬೆಳಿಗ್ಗೆ 10-00 ಗಂಟೆಯಿಂದ 11-00 ಗಂಟೆಯ ಸಮಯದಲ್ಲಿ ಚಾಸಾ-1 ರವರು ತೋರಿಸಿದ ಅಪಘಾತವಾದ ಸ್ಥಳದಲ್ಲಿ ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಪಂಚನಾಮೆಯನ್ನು ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪಂಚನಾಮೆಯನ್ನು ಬರೆಯುವ ಸಮಯದಲ್ಲೇ ನಿಪಿ-6 ರಿಂದ 11 ರಂತೆ ಪೋಲೀಸರು ಅಪಘಾತದ ಸ್ಥಳದಲ್ಲಿ ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ ಎಂದರೆ ಸರಿ. ಪೋಲೀಸರು ದಿನಾಂಕಃ 20.03.2017 ರಂದು ನನ್ನ ಹಾಗೂ ಚಾಸಾ-2 ಮತ್ತು 4 ರವರ ಸಮಕ್ಷಮದಲ್ಲಿ ಶವ ಪಂಚನಾಮೆಯನ್ನು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗಳಿಗೆ ಅನುಕೂಲ ಮಾಡಿಕೊಡಲು ಪಂಚನಾಮೆ ಮತ್ತು ಶವ ಪಂಚನಾಮೆಯನ್ನು ಬರೆಯುವ ಸಂದರ್ಭದಲ್ಲಿ ಹಾಜರಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 1 ನೇ ಆರೋಪಿ ಪರ ಶ್ರೀ ವಿ.ವಿ.ಎಲ್. ವಕೀಲರಿಂದಃ

1. ಪೋಲೀಸರು ಅಪಘಾತದ ಜಾಗೆಯಲ್ಲಿ ಪಂಚನಾಮೆಯನ್ನು ಬರೆದಿರುವುದಿಲ್ಲ ಎಂದರೆ ಸರಿ. ನಾನು ನಿಪಿ-3 ರ ಪಂಚನಾಮೆಗೆ ರಟ್ಟಿಹಳ್ಳೀ ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಶವ ತನಿಖಾ ವರದಿಯನ್ನು ಬರೆಯುವಾಗ ಆಸ್ಪತ್ರೆಯಲ್ಲಿ 2 ನಿಮಿಷಗಳವರೆಗೆ ಹಾಜರಿದ್ದೆ. ಛಾಯಾಚಿತ್ರಗಳನ್ನು ತೆಗೆದುಕೊಳ್ಳುವುದನ್ನು ಹೊರತುಪಡಿಸಿ ನನ್ನ ಸಮಕ್ಷಮ ಶವಪಂಚನಾಮೆಯನ್ನು ಜರುಗಿಸಿರುವುದಿಲ್ಲ ಎಂದರೆ ಸರಿ. ಶವ ಪಂಚನಾಮೆಗೆ ನಾನು ಸಹಿಯನ್ನು ರಟ್ಟಿಹಳ್ಳಿ ಪೋಲೀಸ್ ಠಾಣೆಯಲ್ಲಿ ಬರೆದಿರುತ್ತೇನೆ.

**ಪಾಟೀ ಸವಾಲುಃ 2** ನೇ ಆರೋಪಿ ಪರ ಶ್ರೀ ಯು.ಬಿ.ಜೆ. ವಕೀಲರಿಂದಃ

1 ನೇ ಆರೋಪಿಯ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅನುಮೋದಿಸಿಕೊಂಡಿರುತ್ತಾರೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.